**4ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ತುಮಕೂರು-ಮಧುಗಿರಿ**

**ಎಸ್.ಸಿ.ಸಂಖ್ಯೆಃ** 5045/2024 ಪ್ರಾಸಾ-1
ಚಾಸಾ-1

ದಿನಾಂಕಃ 03-11-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಗೋವಿಂದರಾಜು |
| **ತಂದೆಯ / ಗಂಡನ ಹೆಸರು** | ಓಬಳೇಶಪ್ಪ |
| **ವಯಸ್ಸು** | 32 |
| **ಉದ್ಯೋಗ** | ಸಿಪಾಯಿ, ಭಾರತೀಯ ಸೇನೆ |
| **ವಾಸಸ್ಥಳ** | ರಾಯವಾರ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ನಾನು 12 ವರ್ಷದಿಂದ ಭಾರತೀಯ ಭೂ ಸೇನೆಯಲ್ಲಿ ಸಿಪಾಯಿಯಾಗಿ ಲೇಲಡಾಕ್, ಚುಮ್ಮತ್ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ನನ್ನ ಸ್ವಂತ ಊರು ಕೊರಟಗೆರೆ ತಾಲ್ಲೂಕು, ರಾಯವಾರ . ನನ್ನ ತಂದೆ ತಾಯಿಗೆ 3 ಜನ ಮಕ್ಕಳು. ಅವರುಗಳು ಎಂದರೆ ನಾನು, ನನ್ನ ಅಣ್ಣ ರಾಘವೇಂದ್ರ, ನನ್ನ ತಂಗಿ ಅರ್ಚನ. ನನ್ನ ತಂಗಿ ಮದುವೆಯಾಗಿ ತನ್ನ ಗಂಡನ ಮನೆಯಲ್ಲಿ ವಾಸ ಮಾಡುತ್ತಿದ್ದಾಳೆ. ನಾನು ಮತ್ತು ನನ್ನ ಅಣ್ಣ ನನ್ನ ತಂದೆ ತಾಯಿಯೊಂದಿಗೆ ಕುಟುಂಬದಲ್ಲಿ ವಾಸ ಮಾಡುತ್ತಿದ್ದೇವೆ. ನಾನು ವರ್ಷದಲ್ಲಿ 2 ಬಾರಿ ರಜೆ ಪಡೆದು ಊರಿಗೆ ಬರುತ್ತಿದ್ದೆ. ದಿನಾಂಕಃ 21-05-2024 ರಂದು ರಾತ್ರಿ 9-00 ಗಂಟೆಗೆ ಮನೆಯಿಂದ ನಾನು ಬೈರನಹಳ್ಳಿ ಕ್ರಾಸ್ ನಲ್ಲಿರುವ ಎನ್ ಟಿ ಆರ್ ಕಂಫರ್ಟ್ ಬಾರ್ ಅಂಡ್ ರೆಸ್ಟೋರೆಂಟ್ ಗೆ ಬಂದೆ. ನಾನು ಮದ್ಯಪಾನ ಮಾಡಿ ಸುಮಾರು 9-45 ಗಂಟೆಗೆ ವಾಪಸ್ಸು ಹೊರಟಾಗ ದಾರಿಗೆ ನ್ಯಾಯಾಲಯದ ಮುಂದೆ ಇರುವ ಎಲ್ಲಾ ಆರೋಪಿತರು ದಾರಿಗೆ ಅಡ್ಡಲಾಗಿ

ನಿಂತಿದ್ದರು. ನಾನು ಅವರಿಗೆ ಜಾಗ ಬಿಡು ಎಂದು ಕೇಳಿದಾಗ ಆರೋಪಿ ಪುನೀತ್ ಲೋಫರ್ ಮಗನೆ ನಮ್ಮನೇ ದಾರಿ ಬಿಡು ಎಂದು ಕೇಳುತ್ತೀಯ ಎಂದು ಬೈದ ಅದಕ್ಕೆ ನಾನು ಬೈದೆ. ನಾನು ಮನೆಗೆ ಹೋಗುತ್ತಿದ್ದಾಗ ಬಾರ್ ಹತ್ತಿರವೇ ಬಿದ್ದೆ. ಆಗ ನನಗೆ ಪ್ರಜ್ಞೆ ತಪ್ಪಿತ್ತು. ನಮ್ಮ ಅಣ್ಣ ಬಂದು ನನ್ನನ್ನು ಕೊರಟಗೆರೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿರುತ್ತಾರೆ. ನಾನು ಪೊಲೀಸರಿಗೆ ದೂರು ಕೊಟ್ಟಿರುವುದಿಲ್ಲ. ಪೊಲೀಸರ ಹೇಳಿಕೆಯ ಮೇರೆಗೆ ನಾನು ಸಹಿ ಹಾಕಿರುತ್ತೇನೆ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನ್ನ ಮೇಲೆ ಹಲ್ಲೆ ಮಾಡಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಪಿರ್ಯಾದಿಯನ್ನು ನೋಡಿದೆನು. ಅದರ ಮೇಲೆ ನನ್ನ ಸಹಿ ಇರುತ್ತದೆ. ಅದನ್ನು ನಾನು ಗುರುತಿಸುತ್ತೇನೆ. ಸದರಿ ಪಿರ್ಯಾದಿಯನ್ನು ನಿಪಿ 1 ಎಂದು, ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ಪಿರ್ಯಾದಿಯನ್ನು ನಾನು ಓದದೆ ಸಹಿ ಹಾಕಿರುತ್ತೇನೆ. ನಿಪಿ 1ರಲ್ಲಿ ಬರೆದ ವಿಷಯ ನನಗೆ ಗೊತ್ತಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ ಸ್ಥಳ ಪಂಚನಾಮೆಯನ್ನು ನೋಡಿದೆನು. ಅದರ ಮೇಲೆ ನನ್ನ ಸಹಿ ಇರುತ್ತದೆ. ಅದನ್ನು ಗುರುತಿಸುತ್ತೇನೆ. ಸದರಿ ಪಂಚನಾಮೆಯನ್ನು ನಿಪಿ 2 ಅದರ ಮೇಲೆ ಇರುವ ಸಾಕ್ಷಿ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು. ನಿಪಿ 2 ರಲ್ಲಿ ಬರೆದ ವಿಷಯ ನನಗೆ ಗೊತ್ತಿರುವುದಿಲ್ಲ. ನಾನು ಪೊಲೀಸರಿಗೆ ಯಾವುದೇ ವಸ್ತುವನ್ನು ಕೊಟ್ಟಿರುವುದಿಲ್ಲ. ಪೊಲೀಸರು ಏನು ಅಮಾನತ್ತುಪಡಿಸಿಕೊಂಡರು ಎಂದು ನನಗೆ ಗೊತ್ತಿಲ್ಲ. ಪೊಲಿಸರಿಗೆ ನಾನು ಮರು ಹೇಳಿಕೆ ಕೊಟ್ಟಿರುವುದಿಲ್ಲ. ಸಾಕ್ಷಿಗೆ 4 ಫೋಟೋಗಳನ್ನು ತೋರಿಸಿದ್ದು ಸದರಿ ಫೋಟೋಗಳನ್ನು ಗುರುತಿಸಿರುತ್ತಾರೆ. 4 ಫೋಟೋಗಳನ್ನು ಬಾರ್ ಹತ್ತಿರ ತೆಗೆದಿರುತ್ತಾರೆ. ಪೊಲೀಸರು ಅಲ್ಲಿ ಗಲಾಟೆ ಆಗಿದೆ ಎಂದು ನನ್ನ ವೋಲೆ ಹಲ್ಲೆ ಆಗಿದೆ ಎಂದು ಸ್ಥಳಕ್ಕೆ ಬೇಟಿ ಕೊಟ್ಟು ಫೋಟೋ ತೆಗೆದಿರುತ್ತಾರೆ. ಸದರಿ ಫೋಟೋ ನಿಪಿ 3 ರಿಂದ 6 ಎಂದು ಗುರುತಿಸಲಾಯಿತು. ನಿಪಿ 3 ರಿಂದ 6 ರಲ್ಲಿ ತಮ್ಮ ಹೇಳಿಕೆಯನ್ನು ಗುರುತಿಸಿರುತ್ತಾರೆ. ಪೊಲಿಸರು ಬಾಟಲಿ ಮತ್ತು ಒಂದು ಟೀ ಶರ್ಟ್ ತೆಗೆದುಕೊಂಡಿರುತ್ತಾರೆ. ಟೀ ಶರ್ಟ್ ನೋಡಿದರೆ ಗುರುತಿಸುತ್ತೇನೆ. ನ್ಯಾಯಾಲಯದ ಮುಂದೆ ಇರುವ ಪ್ಯಾಕ್ ಆಗಿರುವ ಬಿಳಿ ಚೀಲ ಹಾಜರು ಮಾಡಿದ್ದು ಅದರ ಮೇಲೆ ಇರುವ ಸೀಲು

ಸುಸ್ತಿತಿಯಲ್ಲಿರುತ್ತದೆ. ಬಿಳಿ ಚೀಲವನ್ನು ನ್ಯಾಯಾಲಯದ ಮುಂದೆ ತೆಗೆದು ಅದರಲ್ಲಿರುವ ಬಟ್ಟೆಯನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿ ಅದು ತನ್ನದು ಎಂದು ಗುರುತಿಸಿದ ಮೇರೆಗೆ ಎಂ ಒ 1 ಎಂದು ಗುರುತಿಸಲಾಯಿತು. ಪೊಲೀಸರು ಟೀ ಶರ್ಟ್ ಕೇಳಿರುತ್ತಾರೆ ಆದ್ದರಿಂದ ಕೊಟ್ಟಿರುತ್ತೇನೆ. ಆರೋಪಿತರು ನನ್ನ ಮೇಲೆ ಯಾವುದೇ ಹಲ್ಲೆ ಮಾಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**<u>ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-</u>**

ನಾನು ಆರೋಪಿತರಿಗೆ ನನ್ನನ್ನು ಯಾಕೆ ಬೈಯುತ್ತೀರಿ ಎಂದು ಕೇಳಿದಾಗ ಪುನೀತ್ ನನ್ನನ್ನೇ ಪ್ರಶ್ನೆ ಮಾಡುತ್ತೀಯ ಎಂದು ನಿನ್ನನ್ನು ಕೊಲೆ ಮಾಡದೆ ಬಿಡುವುದಿಲ್ಲ ಎಂದು ಆರೋಪಿ ಪುನೀತ್ ಅಲ್ಲಿಯೇ ಬಿದಿದ್ದ ಖಾಲಿ ಬೀರ್ ಬಾಟಲಿಯನ್ನು ತೆಗೆದುಕೊಂಡು ನನ್ನನ್ನು ಕೊಲೆ ಮಾಡುವ ಉದ್ದೇಶದಿಂದ ನನ್ನ ತಲೆಯ ಎಡ ಭಾಗಕ್ಕೆ ಹೊಡೆದು ರಕ್ತ ಗಾಯ ಪಡಿಸಿದನು. ನಂತರ ಆರೋಪಿ 2, 4 ಮತ್ತು 5 ರವರು ಕೈಯಿಂದ ಗುದ್ದಿ ಕಾಲಿನಿಂದ ಒದ್ದು ಅಷ್ಟರಲ್ಲಿ 3ನೇ ಆರೋಪಿ ಖಾಲಿ ಬೀರ್ ಬಾಟಲಿಯಿಂದ ನನ್ನ ತಲೆಯ ಬಲ ಭಾಗಕ್ಕೆ ಹೊಡೆದು ರಕ್ತ ಗಾಯ ಪಡಿಸಿದನು. ನಾನು ಕಿರುಚಿದಾಗ ಬಾರ್ ನ ಕ್ಯಾಶಿಯರ್ ಮತ್ತು ಸಾರ್ವಜನಿಕರು ಬಂದಿದ್ದನ್ನು ನೋಡಿ ಅವರೆಲ್ಲರು ಓಡಿ ಹೋದರು ಎಂದರೆ ಸರಿಯಲ್ಲ. ಆರೋಪಿತರೆ ಎಲ್ಲರು ನನ್ನನ್ನು ಕೊಲೆ ಮಾಡುವ ಉದ್ದೇಶದಿಂದ ಹೊಡೆದಿರುತ್ತಾರೆ ಎಂದು ನಿಪಿ 1 ರಂತೆ ಪಿರ್ಯಾದಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಪಿ 1 ರಂತೆ ನಾನೇ ಹೇಳಿ ಟೈಪ್ ಮಾಡಿ ಪಿರ್ಯಾದಿ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ.

ದಿನಾಂಕಃ 23-05-2024 ರಂದು ಎನ್ ಟಿ ಆರ್ ಕಂಫರ್ಟ್ ಬಾರ್ ಅಂಡ್ ರೆಸ್ಟೋರೆಂಟ್ ಹತ್ತಿರ ಪೊಲೀಸರು ಬಂದಿದ್ದಾಗ ನನಗೆ ಹಲ್ಲೆ ಮಾಡಿದ ಜಾಗವನ್ನು ತೋರಿಸಿದ್ದು, ಸದರಿ ಸ್ಥಳಕ್ಕೆ ಎಫ್ ಎಸ್ ಎಲ್ ಅಧಿಕಾರಿಗಳು ಬಂದು ಸ್ಥಳದಲ್ಲಿ ಬಿದಿದ್ದ ರಕ್ತವನ್ನು ಸಂಗ್ರಹಿಸಿದರು ಮತ್ತು ನಾನು ಒಡೆದ ಬಾಟಲಿಯನ್ನು ತೋರಿಸಿ ಹಾಜರುಪಡಿಸಿದೆನು. ಪೋಲಿಸರು ಅಮಾನತ್ತುಪಡಿಸಿ ಮಹಜರ್ 1-30 ರಿಂದ 2-30 ರವರೆಗೆ

ಮಾಡಿ ನನ್ನ ಸಹಿ ತೆಗೆದುಕೊಂಡರು ಎಂದರೆ ಸರಿಯಲ್ಲ. ಆರೋಪಿತರು ಬೀರ್ ಬಾಟಲಿಯಿಂದ ನನ್ನ ತಲೆಗೆ ಹೊಡೆದಿದ್ದರಿಂದ ನನ್ನ ಟೀ ಶರ್ಟ್ ಗೆ ರಕ್ತದ ಕಲೆಯಾಗಿರುತ್ತದೆ ಎಂದು ಪೋಲಿಸರಿಗೆ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಕೊರಟಗೆರೆ ಆಸ್ಪತ್ರೆಯಲ್ಲಿ ನ4 ಜನ ಅಪರಿಚಿತರು ನಂನ್ನ ಮೇಲೆ ಬೀರ್ ಬಾಟಲಿಯಿಂದ ಹಲ್ಲೆ ಮಾಡಿರುತ್ತಾರೆ ಎಂದು ವೈದ್ಯರಿಗೆ ಹೇಳಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕಃ 23-05-2024 ರಂದು ನಾನು ಠಾಣೆಗೆ ಹಾಜರಾಗಿ ಮರು ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಮರು ಹೇಳಿಕೆಯಲ್ಲಿ ನಾನು ದೂರಿನಲ್ಲಿ ಅರಸಾಪುರದ ನವೀನ ಎಂದು ಬರೆಸಿದ್ದು ಆತನ ನಿಜವಾದ ಹೆಸರು ಭರತ್ ಎಂದು ಹೇಳಿಕೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮರು ಹೇಳಿಕೆ ನಿಪಿ 7 ಎಂದು ಗುರುತಿಸಲಾಯಿತು. ನಿಪಿ 7 ರಂತೆ ಹೇಳಿಕೆ ಕೊಟ್ಟಿದ್ದರೂ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ 1 ರಂತೆ ನಾನೇ ಖುದ್ದಾಗಿ ಪಿರ್ಯಾದಿ ಕೊಟ್ಟಿದ್ದರೂ ಕೂಡ ಪೊಲಿಸರು ಹೇಳಿಕೆ ಮೇರೆಗೆ ಸಹಿ ಹಾಕಿದ್ದೆ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಪಂಚನಾಮೆಯ ಕಾಲಕ್ಕೆ ನಾನೇ ಬೀರ್ ಬಾಟಲಿ ಹಾಜರುಪಡಿಸಿದ್ದರೂ ಕೂಡ ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತಿದ್ದೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯಕ್ಕೆ ಸುಳ್ಳು ಹೇಳಿದರೆ ಶಿಕ್ಷೆ ಆಗುತ್ತದೆ ಎಂದರೆ ನಾನು ನಿಜ ಹೇಳುತ್ತಿದ್ದೇನೆ.

**ಪಾಟಿ ಸವಾಲುಃ 1ನೇ ಆರೋಪಿ ಪರ ಶ್ರೀ. ಬಿ ಕೆ ಪಿ ಎಸ್ ರವರಿಂದಃ-**

ನಾನು ಆ ದಿನ 9 ರಿಂದ 9-45 ಸಂಪೂರ್ಣವಾಗಿ ಮದ್ಯಪಾನ ಮಾಡಿದ್ದೆ ಎಂದರೆ ನಿಜ. ನಾನು ಬಾರ್ ನಿಂದ ಊರಿಗೆ ಹೋಗುವ ದಾರಿ ಅಗಲವಾಗಿತ್ತು ಎಂದರೆ ನಿಜ. ಆ ದಿನ ಪುನೀತ ಜಾಗದಲ್ಲಿ ಇರಲಿಲ್ಲ, ಆತ ನನಗೆ ಬೈದಿಲ್ಲ ಎಂದರೆ ಸರಿಯಲ್ಲ. 1ನೇ ಆರೋಪಿಯನ್ನು ಇದೇ ಮೊದಲ ಬಾರಿಗೆ ನೋಡುತಿದ್ದೇನೆ, ಈ ಮೊದಲು ನೋಡಿಲ್ಲ ಎಂದರೆ ಸರಿಯಲ್ಲ. 1ನೇ ಆರೂಪಿ ಮತ್ತು ನಾನು ಅಕ್ಕಪಕ್ಕದ ಊರಿನವರಾಗಿದ್ದರಿಂದ ದ್ವೇಷ ಇರುವುದರಿಂದ 1ನೇ ಆರೋಪಿ ಬೈದ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**2 ರಿಂದ 5ನೇ ಆರೋಪಿ ಪರ ವಕೀಲರು ಪಾಟಿ ಸವಾಲು ಇಲ್ಲ ಎಂದು ಹೇಳಿರುತ್ತಾರೆ.**

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಓ ತಿ ಹೇ ಸ ಇದೆ.**

**4ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**